**ಜಾವೇದ್ ಅಖ್ತರ್,** ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ

ಕರ್ನಾಟಕ ಸರ್ಕಾರ
Government of Karnataka

**JAWAID AKHTAR,** I.A.S.
Additional Chief Secretary to Govt.
Forest, Ecology and Environment
Department

**ಅ.ಸ.ಪ.ಸಂ.: ಎಫ್‌ಇಇ 05 ಎಫ್‌ಎಲ್‌ಎಲ್ 2018** **ದಿನಾಂಕ: 31-07-2023**

ಪ್ರಿಯ ಶ್ರೀ ವಿಜಯ್ ಶರ್ಮಾರವರೆ,

ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕು, ಶಿವನಸಮುದ್ರ ಗ್ರಾಮ ಬರಚುಕ್ಕಿ ಪಾತ್ರದ ಕಾವೇರಿ ನದಿ ಎಡದಂಡೆಯಲ್ಲಿ ಬರಚುಕ್ಕಿ ಕಿರುಜಲ ವಿದ್ಯುತ್ ಯೋಜನೆಗೆ 4.4188 (revised to 3.0188 ha) ಹೆಕ್ಟೇರ್ ಅರಣ್ಯ ಭೂಮಿಯನ್ನು ಮೆ॥ ಮಧ್ಯರಂಗ ಎನರ್ಜಿ ಪ್ರೈ.ಲಿ. ಬೆಂಗಳೂರು ಇವರಿಗೆ ಜಮೀನು ಮಂಜೂರು ಮಾಡುವ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಉಪಯೋಗಿ ಸಂಸ್ಥೆಯಾದ ಮೆ: ಮಧ್ಯರಂಗ ಎನರ್ಜಿ ಪ್ರೈವೇಟ್ ಲಿಮಿಟೆಡ್ ಇವರ ದಿನಾಂಕ: 11-07-2023ರಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು, ಸದರಿ ಮನವಿಯಲ್ಲಿ ಉಪಯೋಗಿ ಸಂಸ್ಥೆಯ ಸಲ್ಲಿಸಿರುವ ಅಂಶಗಳನ್ನು ಕೂಲಂಕಷವಾಗಿ ನಿಯಮಾನುಸಾರ ಪರಿಶೀಲಿಸಿ ತಮ್ಮ ಸ್ಪಷ್ಟ ಅಭಿಪ್ರಾಯ/ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ದಿನಾಂಕ: 14-07-2023 ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಪತ್ರ ಹೊರಡಿಸಲಾಗಿತ್ತು. ಅದರೇ ಇದುವರೆವಿಗೂ ತಮ್ಮಿಂದ ಯಾವುದೇ ಮಾಹಿತಿ/ವರದಿಯು ಸ್ವೀಕೃತವಾಗಿರುವುದಿಲ್ಲ. ಏತನ್ಮಧ್ಯೆ ಉಪಯೋಗಿ ಸಂಸ್ಥೆಯವರು ದಿನಾಂಕ:12-07-2023ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ) ಸದರಿ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಿ, ತಮ್ಮ ಸ್ಪಷ್ಟ ಅಭಿಪ್ರಾಯ/ವರದಿಯನ್ನು **ಮೂರು ದಿನಗಳಲ್ಲಿ** ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿದೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ

31/7/23

**ಶ್ರೀ ವಿಜಯ್ ಶರ್ಮಾ, ಭಾ.ಅ.ಸೇ.,**
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ),
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-560003.

ನಂ. 448, 4ನೇ ಮಹಡಿ, ಗೇಟ್ ನಂ.2, ಬಹುಮಹಡಿ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001
ದೂರವಾಣಿ: 080-2225 6722 / 2203 2509, ಫ್ಯಾಕ್ಸ್: 080-2225 8393, ಮಿಂಚಂಚೆ: prs-fee@karnataka.gov.in / prsfee@gmail.com
No. 448, 4th floor, Gate No.2, M.S. Building, Dr. B.R.Ambedkar Veedhi, Bengaluru – 560 001
Tel: 2225 6722 / 2203 2509, Fax: 080-2225 8393, Email: prs-fee@karnataka.gov.in / prsfee@gmail.com

**Madhyaranga Energy Pvt.Ltd.** (OPC)
Mallige House, 31/32, Crescent Road, Bangalore 560001
Phone: 8050005577 Email: info@mrenergy.co.in
Web: www.madhyaranga.com
CIN: U40104KA2014OPC076758

ದಿನಾಂಕ: 12-07-2023

**ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳಿಗೆ**
**ಕರ್ನಾಟಕ ಸರ್ಕಾರ**

**ವಿಷಯ: ೫ ಮೆಗಾ ವ್ಯಾಟ್ ಸಾಮರ್ಥ್ಯದ ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಗೊಳಿಸಲು ಅರಣ್ಯ ಇಲಾಖೆಯ ಅನುಮೋದನೆಯ ವಿಳಂಬ - ಕುರಿತು**

ಸ್ವಾಮಿ,

ಕರ್ನಾಟಕ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: EN 20 NCE 2013, ದಿನಾಂಕ : 21-05-2013 ಮತ್ತು ವಿಮರ್ಶಿತ ಆದೇಶ ಸಂಖ್ಯೆ: EN 144 NCE 2015, ದಿನಾಂಕ : 20-06-2015 ಪ್ರಕಾರ ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಸತ್ತೇಗಾಲ ಗ್ರಾಮದಲ್ಲಿ, ಭರಚುಕ್ಕಿ ಜಲಪಾತದ ಎಡ ದಂಡೆಯ ಕೆಳಭಾಗದಲ್ಲಿ 5 ಮೆಗಾವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಗೊಳಿಸಲು ನಮ್ಮ ಸಂಸ್ಥೆಯಾದ M/s, ಮಧ್ಯರಂಗ ಎನರ್ಜಿ ಪ್ರೈವೇಟ್ ಲಿಮಿಟೆಡ್ ಗೆ ಆದೇಶ ನೀಡಲಾಗಿತ್ತು.

ಮುಂದುವರೆದು, ಸರ್ಕಾರದ ಆದೇಶದಲ್ಲಿ ಉಲ್ಲೇಖಿಸಿರುವಂತೆ, ಅರಣ್ಯ ಇಲಾಖೆಯನ್ನು ಹೊರತುಪಡಿಸಿ ಎರಡು ವರ್ಷದೊಳಗೆ ಕೆನರಾ ಬ್ಯಾಂಕ್‌ನಿಂದ ಹಣಕಾಸು ಅನುಮೋದನೆ ಸೇರಿದಂತೆ ಎಲ್ಲಾ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ / ಅನುಮೋದನೆ ಯನ್ನು ಪಡೆದುಕೊಂಡಿರುತ್ತೇವೆ.

ಅರಣ್ಯ ಇಲಾಖೆಯ ಅನುಮೋದನೆಗೆ ಸಂಬಂಧಿಸಿದಂತೆ, ನಮ್ಮ ಅರ್ಜಿ ಸಂಖ್ಯೆ: FP/KA/HYD/14621/2015 ದಿನಾಂಕ: 13/08/2015 ರಂದು ಆನ್ಲೈನ್ ಮೂಲಕ ಸಲ್ಲಿಸಲಾಯಿತು. ದಿನಾಂಕ: ೧೯/೦೫/೨೦೧೬ ರಂದು ಚಾಮರಾಜನಗರ ವೃತ್ತ ಕಚೇರಿಯಲ್ಲಿ ನಮ್ಮ ಪ್ರಸ್ತಾವನೆಯು ತಿರಸ್ಕೃತಗೊಂಡಿತು.

ಈ ವಿಷಯಕ್ಕೆ ಸಂಬಂಧಿಸಿದಂತೆ, ಅಂದಿನ ಮಾನ್ಯ ಗೌರವಾನ್ವಿತ ಮಂತ್ರಿಗಳಾದ ಶ್ರೀ। ರಮಾನಾಥ ರೈ ಅವರ ಆದೇಶದ ಮೇರೆಗೆ ಉನ್ನತ ಅಧಿಕಾರಿಗಳ ತಂಡವನ್ನು ರಚಿಸಿ, ಉದ್ದೇಶಿತ ಸ್ಥಳವನ್ನು ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದರು.

**ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳ ತಂಡವು, ಕ್ಷೇತ್ರ ಅಧಿಕಾರಿಗಳನ್ನು ಒಳಗೊಂಡಂತೆ, ದಿನಾಂಕ:೧೭-೧೨-೨೦೧೬ ರಂದು, ಸದರಿ ಯೋಜನೆ ಮತ್ತು ಇತರೆ 3 ಯೋಜನೆಗಳ ಸ್ಥಳವನ್ನು ಪರಿಶೀಲಿಸಿದರು. ಒಟ್ಟಾರೆ 4 ಯೋಜನೆಗಳ ಪೈಕಿ, ನಮ್ಮ ಯೋಜನೆಯೂ ಸೇರಿದಂತೆ 3 ಯೋಜನೆಯನ್ನು ಪರಿಗಣಿಸಬಹುದೆಂಬ ಶಿಫಾರಸ್ಸಿನೊಂದಿಗೆ ರಾಜ್ಯ ಸರ್ಕಾರಕ್ಕೆ, ದಿನಾಂಕ : ೬.೪.೨೦೧೭ ರಂದು ಪತ್ರವನ್ನು ಸಲ್ಲಿಸಲಾಗಿತ್ತು (ಸದರಿ ಪತ್ರದ ಪ್ರತಿಯನ್ನು ತಮ್ಮ ಅವಗಾಹನೆಗೆ ಲಗತ್ತಿಸಲಾಗಿದೆ).**

-152-

ಈ ಮೇಲೆ ತಿಳಿಸಿದ ಅನುಮೋದಿತ ಪತ್ರದ ಆಧಾರಧ ಮೇರೆಗೆ, ಶಿಫಾರಸ್ಸು ಮಡಿದ 3 ಯೋಜನೆಯಲ್ಲಿ, ನಮ್ಮನ್ನು ಹೊರತು ಪಡಿಸಿ M/s, ಶಿವನ ಸಮುದ್ರಮ್ಮ್ ಪವರ್ ಲಿಮಿಟೆಡ್ ರವರಿಗೆ ರಾಜ್ಯ ಸರ್ಕಾರದ ಪತ್ರ FEE 92 FLL 2017 ದಿನಾಂಕ: 08-01-2018 ರ ಮೂಲಕ ಅನುಮೋದನೆ ನೀಡಲಾಗಿರುವುದು ಸಂಶಯಕ್ಕೆ ಆಸ್ಪದವಾಗಿರುತ್ತದೆ. ನಮ್ಮ ಸ್ಥಳದ ಸಮೀಪದಲ್ಲಿರುವ ಇವರಿಗೆ ಮಂಜೂರುಮಾಡಿ ನಮ್ಮ ಸಂಸ್ಥೆಯ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ.

ಆದರೆ, ಕಳೆದ ೫ ವರ್ಷಳಿಂದ ನಾವು ಸಾಕಷ್ಟು ವಿನಂತಿಸಿದರೂ ಕೂಡ ಇಲಾಖೆಯು ಪರಿಗಣಿಸರುವುದಿಲ್ಲ. ಬಹಳಷ್ಟು ದೊಡ್ಡ ಮೊತ್ತದ ಹೂಡಿಕೆಯ ನಂತರ, ಈ ಪರಿಯ ತಾರತಮ್ಯವು ನಮಗೆ ಬಹಳಷ್ಟು ವೇದನೆ ಹಾಗೂ ಖಿನ್ನತೆಯನ್ನು ಉಂಟುಮಾಡಿತ್ತದೆ.

**ಈ ನಿಟ್ಟಿನಲ್ಲಿ ಖಾವಂದರಲ್ಲಿ ಬೇಡಿಕೊಳ್ಳುವುದೇನೆಂದರೆ, ಉನ್ನತ ಅಧಿಕಾರಿಗಳ ಸಮಿತಿಯು ನೀಡಿರುವ ಆದೇಶದ ಅನ್ವಯ ನಮ್ಮ ಸಂಸ್ಥೆಯಾದ ಮೆ|| ಮಧ್ಯರಂಗ ಎನರ್ಜಿ ಪ್ರೈವೇಟ್ ಲಿಮಿಟೆಡ್ ಗೆ ಅನುಮೋದನೆ ನೀಡುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕಾಗಿ ತಮ್ಮಲ್ಲಿ ಪ್ರಾರ್ಥಿಸುತ್ತೇನೆ ಹಾಗೂ ನಮಗೂ ಸಮಾನತೆ ಮತ್ತು ನ್ಯಾಯವನ್ನು ನೀಡುವಂತೆ ವಿನಂತಿಸುತ್ತೇನೆ.**

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ಮದ್ಯರಂಗ ಎನರ್ಜಿ ಪ್ರೈ. ಲಿ.

**(ವಿ. ಶ್ರೀನಿವಾಸಮೂರ್ತಿ)**
**ನಿರ್ದೇಶಕರು**